**ಅ. ದಾ. ಸಂ. 166/2023**

**ಪಿ. ಡಬ್ಲೂ - 01**

**ದಿನಾಂಕ: 15-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ. ಕೆ. ಕೆ, ವಕೀಲರಿಂದ:-**

**01.** ನಾನು 10 ನೇ ತರಗತಿಯವರೆಗೆ ವಿದ್ಯಭ್ಯಾಸವನ್ನು ಮಾಡಿದ್ದೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಾನು ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ ಮತ್ತು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈಗ ಸಾಕ್ಷಿಗೆ ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿದ್ದು, ಅದರಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆಯು ಯಾವುದು ಎಂದರೆ ಸಾಕ್ಷಿಯು ನಿಪಿ-4 ಎನ್ನುತ್ತಾರೆ. ನಿಪಿ-4 ಖಾತೆ ಅಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಸ್ವತ್ತು ಖಾಲಿ ಜಾಗ ಆಗಿದೆ. ನಿಪಿ-2 ರಿಂದ 4ನ್ನು ನೀವು ನಿಪಿ-1ರ ಆಧಾರದ ಮೇಲೆ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 3ನೇ ಪ್ಯಾರದಲ್ಲಿ ಕ್ರ. ಸಂ.668/1/665/2 ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1ರಲ್ಲಿ ಪೂರ್ವ ಪಶ್ಚಿಮ 30 ಅಡಿ ಮತ್ತು ಉತ್ತರ-ದಕ್ಷಿಣ 40 ಅಡಿ ಎಂದು ನಮೂದಿಸಲಾಗಿದೆ. ಈಗ ಸಾಕ್ಷಿಗೆ ನಿಪಿ-1ನ್ನು ತೋರಿಸಿದ್ದು, ಅದರಲ್ಲಿ ಪೂರ್ವ ಪಶ್ಚಿಮ 30 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿ ಎಂದು ನಮೂದಿಸಲಾಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

02. ನಿಪಿ-1ರಲ್ಲಿ ವಿಸ್ತೀರ್ಣವನ್ನು ನಮೂದಿಸದೇ ಇರುವ ಕಾರಣ ನೀವು ನಿಪಿ-2ರಿಂದ 4ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-1ನ್ನು ತೋರಿಸಿದ್ದು, ಅದರಲ್ಲಿ ನೀವು ದಾವಾಸ್ವತ್ತಿಗೆ ತೋರಿಸುವಂತೆ ಗುಡೇಮಾನರಹಳ್ಳಿ ಗ್ರಾಮ ಪಂಚಾಯಿತಿ ಎಂದು ನಮೂದಿಸಲಾಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಮೋಟಗಾನಹಳ್ಳಿ ಮಂಡಲ್

ಪಂಚಾಯಿತಿ ಎಂದು ನಮೂದಿಸಲಾಗಿದೆ ಎನ್ನುತ್ತಾರೆ. ದಾವಾಸ್ವತ್ತನ್ನು ನೀವು ಅಳತೆ ಮತ್ತು ನಕ್ಷೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಅಳತೆಯನ್ನು ಮಾಡಿಸಿದ್ದೇನೆ ಮತ್ತು ಅದರ ಆಧಾರದ ಮೇಲೆ ಸ್ವಾಧೀನದಲ್ಲಿ ಇದ್ದೇನೆ ಎನ್ನುತ್ತಾರೆ. ನಾನು ದಾವಸ್ವತ್ತನ್ನು ಅಳತೆ ಮಾಡಿಸಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಾನು ಕಂದಾಯವನ್ನು ಪಾವತಿ ಮಾಡಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ರಸೀತಿಯನ್ನು ಹಾಜರುಪಡಿಸಿರುವುದಿಲ್ಲ.

03. ಪ್ರತಿವಾದಿಯು ದಾವಸ್ವತ್ತಿಗೆ ವಾಲ್ಮಿಕಿ ಸಂಘದ ಫಲಕವನ್ನು ಹಾಕಲು ಪ್ರಯತ್ನ ಪಟ್ಟಿರುತ್ತಾರೆ. ಪ್ರತಿವಾದಿಯು ವಾಲ್ಮಿಕಿ ಸಂಘದ ಅಧ್ಯಕ್ಷರು ಆಗಿರುತ್ತಾರೆ. ಈ ದಾವೆಯಲ್ಲಿ ನಾನು ವಾಲ್ಮೀಕಿ ಸಂಘವನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ, ಆದರೆ ಅದರ ಅಧ್ಯಕ್ಷರನ್ನು ಪಕ್ಷಕಾರರನ್ನಾಗಿ ಮಾಡಿದ್ದೇನೆ. ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಾನು ಪ್ರತಿವಾದಿಯು ವಾಲ್ಮೀಕಿ ಸಂಘದ ಅಧ್ಯಕ್ಷರು ಮತ್ತು ವಾಲ್ಮೀಕಿ ಸಂಘದ ಫಲಕವನ್ನು ದಾವಸ್ವತ್ತಿನ ಬಳಿ ಹಾಕಲು ಬಂದಿದ್ದರು ಎಂದು ಹೇಳಿರುವುದಿಲ್ಲ. ಸದರಿ ಫಲಕವನ್ನು ಅಳವಡಿಸಲು ಬಂದಾಗ ನಾನು ಪೋ. ಠಾಣೆಗೆ ದೂರನ್ನು ನೀಡಿರುತ್ತೇನೆ, ಆದರೆ ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

04. ನನಗೆ ದಾವಾಸ್ವತ್ತಿನ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಗ್ರಾಮ ಠಾಣಾ, ಉತ್ತರಕ್ಕೆ ಜಯಣ್ಣನವರ ನಿವೇಶನ ಮತ್ತು ದಕ್ಷಿಣಕ್ಕೆ ಮೋಟಗೊಂಡನಹಳ್ಳಿ ರಸ್ತೆ. ಕಾನೇಷ್ ಕುಮಾರಿ ಸಂ.665/3 ಗ್ರಾಮ ಪಂಚಾಯಿತಿ ಸ್ವತ್ತು ಆಗಿರುತ್ತದೆ ಮತ್ತು ಸದರಿ ಸ್ವತ್ತು ಗುಡೇಮಾರನಹಳ್ಳಿಯ ಪಿ.ಡಿ.ಓ ರವರ ಹೆಸರಿನಲ್ಲಿ ಇದೆ. ನಾನು ಪಿ.ಡಿ.ಓ ರವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಏಕೆಂದರೆ ಅವರು ನನಗೆ ತೊಂದರೆಯನ್ನು ನೀಡಿರುವುದಿಲ್ಲ. ದಾವಾಸ್ವತ್ತಿನ ಬಳಿ ರಸ್ತೆಯ ಪಕ್ಕದಲ್ಲಿ ನೀರಿನ ಘಟಕ ಇದೆ. ಕಾನೇಷ್ ಕುಮಾರಿ ಸಂ. 665/3ರಲ್ಲಿ ಮಹರ್ಷಿ ವಾಲ್ಮೀಕಿ ನಾಯಕರ ಸಂಘವನ್ನು ನಿರ್ಮಾಣ ಮಾಡಲು

ಗುಡೇಮಾರನಹಳ್ಳಿ ಗ್ರಾಮ ಪಂಚಾಯಿತಿಯವರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಒಂದು ಸರ್ವೆ ನಕ್ಷೆಯನ್ನು ಸಹ ತಯಾರು ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸ್ಥಳ ಪಂಚನಾಮೆಗೆ ಸಾಕಷ್ಟು ಗ್ರಾಮಸ್ತರು ತಮ್ಮ ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸರ್ವೆ ನಕ್ಷೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಪಿ. ಡಿ. ಓರವರ ಉಸ್ತುವರಿಯಲ್ಲಿ ಮೇಲ್ಮವಿಚಾರಣೆಯನ್ನು ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ದಿ.22-12-2023ರ ಹಿಂಬರಹವನ್ನು ತೋರಿಸಿದ್ದು, ಅದರಂತೆ ದಾವಾಸ್ವತ್ತು ಇರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನೀವು ನಿಮ್ಮ ರಾಜಕೀಯ ಪ್ರಭಾವವನ್ನು ಬೀರಿ ನಿಪಿ-1ರಿಂದ 4ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

05. ನಾನು ಹಾಲಿನ ಡೈರಿಯಲ್ಲಿ ಕೆಲಸವನ್ನು ಮಾಡುತ್ತೇನೆ. ನೀವು ಹಾಲಿನ ಡೈರಿಯಲ್ಲಿ ಕೆಲಸವನ್ನು ಮಾಡುವ ಕಾರಣದಿಂದ ನಿಮ್ಮ ನಿಮ್ಮ ಪ್ರಭಾವವನ್ನು ಬೀರಿ ನಿಪಿ-1ರಿಂದ 4ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿ ಮತ್ತು ಸಮುದಾಯದವರ ಹಲವಾರು ವರ್ಷದ ಶ್ರಮದಿಂದ ಕಟ್ಟಡವನ್ನು ನಿರ್ಮಾಣ ಮಾಡಲು ಅನುಮತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಗುಡೇಮಾರನಹಳ್ಳಿ ಗ್ರಾಮ ಪಂಚಾಯಿತಿಯವರು ಜನರಿಗೆ ಅನುಕೂಲವಾಗುವಂತೆ ಸಮೂದಾಯ ಭವನವನ್ನು ನಿರ್ಮಾಣ ಮಾಡಲು ಮುದಾಗಿದ್ದಾಗ ನೀವು ಅವರಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**

ಮಾಗಡಿ